ಮನೆ ಕಟ್ಟಿಸಲು ತೀರ್ಮಾನಿಸಿರುವ ವಿಷಯ ತಿಳಿಸಿ, 'ಮನೇ ಅಂದ್ರೆ ಸಾಮಾನ್ಯಾನೆ ನಂಜಕ್ಕ, ಏನಿಲ್ಲಾಂದ್ರು ಐವತ್ತು ಲಕ್ಷ ಬೇಕು. ಮೂರು ಫ್ಲೋರ್ ಕಟ್ಟಿಸಿ ಇಪ್ಪತ್ತೈದು ಸಾವಿರ ಬಾಡಿಗೆ ಜೇಬಿಗಿಳಿಸೊ ಪ್ಲಾನ್. ನಿನ್ ಮಗ ಬಾರಿ ಬುದ್ಧಿವಂತ ನಂಜಕ್ಕ. ಒಂದು ಸೈಟು ಮೊದ್ಲೆ ಮಾಡ್ಕಂಡವ್ನೆ. ಇಲ್ಲಾಂದ್ರೆ ಎಲ್ಲಾ ಸೇರಿ ಹತ್ತಿರತ್ತಿರ ಕೋಟಿ ದಾಟಿರೋದು. ಈಗವನ್ಗೆ ಮನಿ ಕಟ್ಟಿಸೋಕೆ ದುಡ್ಡು ಬೇಕಂದ್ರೆ ಎಲ್ಲಿಂದ ಬರುತ್ತೆ ಹೇಳು... ಅದ್ಕೆ ಅವ ಊರಾಗಿರೊ ಆಸ್ತೀನ ಮಾರ್ಬೇಕು ಅಂತ ಡಿಸೈಡ್ ಮಾಡಿಕೊಂಡು ಬಂದಾನ. ನೀ ಹುಂ ಅಂದ್ರ ನಮ್ಮ ಶ್ರೀರಾಮರೆಡ್ಡೀನೆ ತಗೊಳ್ಳೋಕೆ ತಯಾರಿದಾರೆ ನೋಡು. ಎಕರೆಗೆ ಹತ್ತುಲಕ್ಷ ಮಾತಾಡಿದೀವಿ' ಎಂದು ನುಡಿದು ಸುಮ್ಮನಾದ. ನಂಜಮ್ಮ ಅಪರೂಪಕ್ಕೆಂಬಂತೆ ಮೌನವನ್ನು ಹೊದ್ದು ಕುಳಿತಿದ್ದಳು. ಅವಳಿಗೆ ಎಲ್ಲವೂ ಸ್ಪಷ್ಟವಾಗತೊಡಗಿತು. ಎಲ್ಲ ತಯಾರಿಯನ್ನು ಮೊದಲೆ ಮಾಡಿಕೊಂಡು ಬಂದಿದ್ದಾರೆಂಬುದು ಅವಳಿಗೆ ಅರಿವಾಗತೊಡಗಿತು. ಇನ್ನು ತನ್ನ ಸಮ್ಮತಿಯೊಂದೇ ಅವರಿಗೆ ಬೇಕಿರುವುದೆಂಬುದೂ ತಿಳಿಯತೊಡಗಿತು.

ಮಂಜೇಗೌಡ, 'ನಂಜಕ್ಕ, ಎಂಗೂ ಮೂರೆಕರೆ ಐತಿ. ಒಂದೆಕರೆ ನೀನ್ ಮಡಿಕ್ಕೊ. ಮಿಕ್ಕ ಎರಡೆಕರೇನ ಮಾರಿಬಿಡು. ಅವ್ರೂ ಹ್ಯಾಪಿಯಾಗಿರ್ತಾರೆ' ಎಂದು ನುಡಿದು ನಂಜಕ್ಕನ ಪ್ರತಿಕ್ರಿಯೆಗಾಗಿ ಕಾಯತೊಡಗಿದ. ಅವಳು ಮಗ ಮತ್ತು ಸೊಸೆಯ ಕಡೆ ನೋಡತೊಡಗಿದಳು. ಸೊಸೆಯ ಬಾಯಿಯಿಂದ ಮಾತುಗಳು ಬರಲು ಹವಣಿಸುತ್ತಿದ್ದವು. ಅವಳ ಕಂಗಳು ಗಂಡನಿಗೆ ಏನನ್ನೊ ಹೇಳಲು ಪ್ರೇರೇಪಿಸುತ್ತಿದ್ದವು. ನಂಜಮ್ಮನಿಗೆ ಎಲ್ಲವೂ ಅರ್ಥವಾಗತೊಡಗಿತು. ಇನ್ನು ತಡಮಾಡಬಾರದೆಂದು ತೀರ್ಮಾನಿಸಿ ಕೊಡವಿ ಕುಳಿತಳು. ಮಂಜೇಗೌಡನ ಕಡೆಗೆ ನೋಡುತ್ತಾ, 'ನೋಡು ಮಂಜಪ್ಪ, ನನ್ನಾತ್ನ ಯೇಳ್ತಿವ್ನಿ ಯಾರೂ ಅಡ್ಡ ಮಾತಾಡ್ಬಾರ್ದು ಆಯ್ತು. ನಂಕೆ ಈ ವಯಸ್ನಾಕೆ ಬಿಸ್ಲಲ್ಲಿ ಗೇಮೆ ಮಾಡಾಕಾಗುತ್ತ. ಶೇನು ಗೀನು ಎಂತೂ ಬೇಡ. ಒಂದ್ರೇಟ್ ಫಿಕ್ಸ್ ಮಾಡಿ ಎಲ್ಲ ಮಾರ್ಬಿಟ್ಟು ಮಗನ್ಗೆ ಕೊಟ್ಬಿಡಿ. ಪಾಪ ದೊಡ್ಡ ಮನಿ ಕಟ್ಟಿಸಾಕೆ ವಂಟವ್ನೆ. ನಾನ್ ತಾನೆ ಇನ್ನೇಟು ದಿನ ಇರ್ತೀನಿ. ನಿಮ್ಮಂತಾವ್ರ ಮನೇಕೆ ತಿಂದ್ಕಂಡು ಕಾಲ ಹಾಕ್ತೀನಿ. ಎಂಗೂ ಇರಾಕೆ ಈ ಮನಿ ಐತಿ' ಎಂದು ನುಡಿದು ಮಗ ಮತ್ತು ಸೊಸೆಯ ಕಡೆಗೆ ನೋಡಿದಳು. ಅವರಿಬ್ಬರ ಮುಖಗಳು ಅರಳಿದ್ದವು. ಸಮಸ್ಯೆ ಇಷ್ಟೊಂದು ಸುಲಭವಾಗಿ ಪರಿಹಾರವಾಗುತ್ತದೆಂದು ಅವರು ಎಣಿಸಿರಲಿಲ್ಲ. ಮೊದಲೆ ಗಯ್ಯಾಳಿಯಾದ ನಂಜಮ್ಮ ಇಡೀ ಊರಿಗೆ ಕೇಳಿಸುವ ಹಾಗೆ ರಂಪ ಮಾಡಬಹುದೆಂಬ ಅಂದಾಜಿನಲ್ಲಿ ಅವರು ಬಂದಿದ್ದರು. ನಂಜಮ್ಮ ಮೊಮ್ಮಗಳ ಕಡೆಗೆ ನೋಡಿದಳು. ಅವಳು ತಾಯಿಯ ಸೀರೆಯ ಬಣ್ಣದ ಎಳೆಗಳನ್ನು ಮುಗ್ಧವಾಗಿ ನೋಡುತ್ತಿದ್ದಳು. ವಿಷಯ ಇಷ್ಟೊಂದು ಸುಲಭವಾಗಿ ಇತ್ಯರ್ಥವಾಯಿತಲ್ಲ ಎಂಬ ಖುಷಿಯಲ್ಲಿ ಎಲ್ಲರೂ ಎದ್ದುನಿಂತರು. ಮಂಜೇಗೌಡ ಮತ್ತು ನಾಗರಾಜ ಶ್ರೀರಾಮರೆಡ್ಡಿಗೆ ಎರಡು ತಿಂಗಳೊಳಗಾಗಿ ದುಡ್ಡು ಮುಟ್ಟಿಸಲು ತಿಳಿಸಿ ಆಚೆ ಬಂದರು. ನಂಜಮ್ಮನ ಮಗ ಮತ್ತು ಸೊಸೆ ತಾವೂ ಹೊರಡುವುದಾಗಿ ಹೇಳಿ ಎದ್ದು ನಿಂತರು. ನಂಜಮ್ಮ ಉಳಿಯಲು ಬಲವಂತ ಮಾಡುವ ಗೋಜಿಗೆ ಹೋಗಲಿಲ್ಲ. ಎಲ್ಲವೂ ಪೂರ್ವ ನಿರ್ಧರಿತವೆ ಆಗಿರುವುದರಿಂದ ತನ್ನ ಮಾತನ್ನು ಅವರು ಕೇಳುವುದೂ ಇಲ್ಲವೆಂದು ಅವಳಿಗೆ ಗೊತ್ತಿತ್ತು. ಆದರೆ ಊಟ ಮಾಡಿಕೊಂಡು ಹೋಗಬಹುದಲ್ಲ ಎಂದು ಕೇಳಿದಳು. ಅದಕ್ಕೆ ಮಗ, 'ಕೈವಾರಕ್ಕೆ ವೋಕ್ತಿದೀವಿ, ಅಲ್ಲೆ ಮಠದಾಕ ತಿಂದ್ಕಂಡು ವೋಕ್ತೀವಿ' ಎಂದು ನುಡಿದ. ಅವಳು ಒಳಗೆ ಹೋಗಿ ಸ್ವಲ್ಪ ಸಮಯದ ನಂತರ ಆಚೆ ಬಂದಳು. ಅವಳ ಕೈಯಲ್ಲಿ ಪೊಟ್ಟಣವಿತ್ತು. 'ಮೊಕ ಇದಾದ್ರು